# ಬೋಧನಾ ಸಾಧನವಾಗಿ ಪ್ರಕೃತಿ ಸಂಚಾರ

ಮದ್ದಿರಾಲ ಸಾಯಿ ಪ್ರವೀಣ್

ಮಕ್ಕಳು ಹೊರಾಂಗಣ ಪ್ರದೇಶಗಳಲ್ಲಿ ನಾನಾ ರೀತಿಯ ಆಟವಾಡುತ್ತ ಕಲಿಯುವುದರಿಂದ ಅವರ ಕಲಿಕೆಯ ಹರವು ವಿಸ್ತಾರಗೊಳ್ಳುತ್ತ ಹೋಗುತ್ತದೆ. ದೈಹಿಕ ಚಲನೆಯ ಕೌಶಲಗಳು ಬೆಳವಣಿಗೆ ಹೊಂದುವುದರೊಂದಿಗೆ ಮಕ್ಕಳ ಮಾನಸಿಕ ಆರೋಗ್ಯ ಕೂಡ ವಿಕಾಸಗೊಳ್ಳುತ್ತದೆ. ಅಂಗನವಾಡಿ ಕೇಂದ್ರಗಳಲ್ಲಿರುವ ಮಕ್ಕಳು ತಮ್ಮ ಸುತ್ತಮುತ್ತ ಇರುವ ಪರಿಸರದಲ್ಲಿ ಸುತ್ತಾಡುವುದರಿಂದ ಕೂಡ ಕಲಿಯಬಹುದು. ಇದನ್ನೇ ಪ್ರಕೃತಿ ಸಂಚಾರ ಎಂದು ಕರೆಯುತ್ತೇವೆ. ಮುಕ್ತವಾದ, ತೆರೆದ ಪ್ರದೇಶದಲ್ಲಿ ವಿಹರಿಸುವ ಈ ಸುತ್ತಾಟದಲ್ಲಿ ಒಂದು ನಿರ್ದಿಷ್ಟ ವಿಷಯದ ಮೇಲೆ ಮಕ್ಕಳಿಗೆ ಶಿಕ್ಷಕರು ಹೊಸ ಸಂಗತಿಗಳನ್ನು ಪರಿಚಯ ಮಾಡಿಸುತ್ತಾರೆ[i]. ಮಕ್ಕಳಿಗೆ ಇದು ದಿನನಿತ್ಯದ ಪಾಠ-ಪ್ರವಚನಕ್ಕಿಂತ ಭಿನ್ನವಾದುದು. ಇಂತಹ ಸುತ್ತಾಟದಲ್ಲಿ ಮಕ್ಕಳು ಹೊಸ ವಿಷಯಗಳಿಗೆ ಮನಸ್ಸನ್ನು ತೆರೆದುಕೊಳ್ಳಬಹುದು ಮತ್ತು ಪರಿಸರದ ಜೊತೆ ಸಂವಹನ ನಡೆಸಬಹುದು. ಇಂತಹ ಸಂವಹನದ ಮೂಲಕ ಅವರು ಖುಷಿ ಮತ್ತು ಅಚ್ಚರಿಯ ಅನುಭವವನ್ನು ಪಡೆಯುತ್ತಾರೆ.

**ವಿವಿಧ ಬಗೆಯ ಪ್ರಕೃತಿ ಸುತ್ತಾಟಗಳು**

ಮಕ್ಕಳನ್ನು ಹೊಲ-ಗದ್ದೆಗಳಿಗೆ, ಪಾರ್ಕ್‌ಗಳಿಗೆ, ಮೈದಾನಗಳಿಗೆ ಅಥವಾ ಒಂದು ಶಾಲೆಗೆ ಕರೆದುಕೊಂಡು ಹೋಗಬಹುದು. ಇಂತಹ ಭೇಟಿಯು ಶಿಕ್ಷಕರು ನಿರ್ಧರಿಸಿದ ಉದ್ದೇಶವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ, ಒಂದು ವೇಳೆ ಗಿಡ ಮತ್ತು ಮರಕ್ಕೆ ಸಂಬಂಧಿಸಿದ ವಿಷಯದಲ್ಲಿ ಚರ್ಚೆ ನಡೆಯುತ್ತಿದ್ದರೆ ಶಿಕ್ಷಕರು ಮಕ್ಕಳನ್ನು ಪಾರ್ಕ್‌ಗೆ ಕರೆದೊಯ್ಯಬಹುದು. ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರದ ಬಗ್ಗೆ ಅನುಭವ ಪಡೆಯುವುದರಿಂದ ಅವರ ಕಲಿಕೆಯು ಸ್ವಾಭಾವಿಕ ರೀತಿಯಲ್ಲಿ ನಡೆಯುತ್ತದೆ. ಇದೇ ರೀತಿಯಲ್ಲಿ ಮಕ್ಕಳನ್ನು ಹತ್ತಿರದ ಅಂಚೆ ಕಚೇರಿಗೆ, ಸೈಕಲ್ ರಿಪೇರಿ ಮಾಡುವ ಅಂಗಡಿಗೆ, ಪೊಲೀಸ್ ಠಾಣೆಗೆ, ಯಾವುದಾದರೂ ಪೂಜಾ ಮಂದಿರಕ್ಕೆ, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ, ಮರಗೆಲಸದ ಅಂಗಡಿ ಮುಂತಾದ ಕಡೆಗಳಿಗೆ ಕರೆದೊಯ್ಯಬಹುದು. ಇಲ್ಲಿ ಮಕ್ಕಳು ಸಮುದಾಯದ ಸದಸ್ಯರೊಂದಿಗೆ ಮಾತನಾಡುವ ಮೂಲಕ ಅವರಿಂದ ಸಾಕಷ್ಟು ವಿಚಾರಗಳನ್ನು ಕಲಿತುಕೊಳ್ಳಬಹುದು. ಇಂದ್ರಿಯ ಅನುಭವಗಳಿಗೆ ಮಕ್ಕಳು ಮುಖಾಮುಖಿಯಾಗುವ ಕಾರಣ ಅವರಿಗೆ ಈ ಸಂಚಾರವು ಅಸೀಮ ಅವಕಾಶಗಳನ್ನು ಒದಗಿಸುತ್ತದೆ.

**ಗಿಡ ಮರಗಳ ವೀಕ್ಷಣೆ**

ಅಂಗನವಾಡಿಯೊಂದರ ಮಕ್ಕಳ ಗುಂಪಿನೊಂದಿಗೆ ಸಂಚಾರ ಹೋಗುವುದರ ಮೂಲಕ ಈ ಬೋಧನಾ ವಿಧಾನದ ಇಡೀ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡೋಣ. ಸಂಚಾರ ಹೋಗುವ ಮುನ್ನಾ ದಿನ ನೀರಿನ ಬಾಟಲಿ ಮತ್ತು ಕೈಚೌಕ ಕಳಿಸುವಂತೆ ಶಿಕ್ಷಕರು ಪಾಲಕರಿಗೆ ತಿಳಿಸಿದರು. ಹೀಗೆ ಸಂಚಾರ ಆರಂಭಿಸುವುದಕ್ಕೂ ಮುನ್ನ ಎಲ್ಲ ಅಗತ್ಯ ಏರ್ಪಾಡುಗಳನ್ನು (ಉದಾಹರಣೆಗೆ, ಪೇಪರ್ ಮತ್ತು ಕ್ರೆಯಾನ್‌ಗಳನ್ನು ಕೊಂಡೊಯ್ಯುವುದು) ಮಾಡಿಕೊಂಡು ಭೇಟಿ ನೀಡುವ ಸ್ಥಳಗಳ ಬಗ್ಗೆಯೂ ಮಕ್ಕಳಿಗೆ ತಿಳಿಸಿದ್ದರು. ಮಕ್ಕಳೆಲ್ಲರೂ ಸದಾ ಗುಂಪಿನಲ್ಲಿ ಜೊತೆಯಾಗಿರಬೇಕು ಎಂದು ಅವರಿಗೆ ಮನವರಿಕೆ ಮಾಡಿಸಿದರು.





ಶಿಕ್ಷಕರು ಮಕ್ಕಳ ಸಾಲಿನ ಮುಂಭಾಗದಲ್ಲಿ ಮತ್ತು ಅಂಗನವಾಡಿ ಸಹಾಯಕಿ ಹಿಂಭಾಗದಲ್ಲಿ ನಿಲ್ಲುವ ಮೂಲಕ ಅಂಗನವಾಡಿಯಿಂದ ನಡಿಗೆಯು ಆರಂಭವಾಯಿತು. ಮಕ್ಕಳು ಮೊದಲು ತರಕಾರಿ ಬೆಳೆದಿರುವ ತೋಟಕ್ಕೆ ಭೇಟಿ ನೀಡಿದರು. ಗಿಡಗಳ ಭಾಗಗಳಾದ ಹೂವು, ಕಾಂಡ, ಮೊಗ್ಗು ಮತ್ತು ತರಕಾರಿಗಳನ್ನು ನೋಡುವಂತೆ ಶಿಕ್ಷಕರು ಮಕ್ಕಳಿಗೆ ಹೇಳುತ್ತಾರೆ. ಇಲ್ಲಿ ಮಕ್ಕಳಿಗೆ ಗಿಡಗಳು, ಹೂವುಗಳು, ಹಣ್ಣುಗಳನ್ನು ಮುಟ್ಟಿ ಅನುಭವಿಸುವ ಹಾಗೂ ಗಿಡಗಳು ಹೇಗೆ ಬೆಳೆಯುತ್ತವೆ? ಗಿಡಗಳು ಕೂಡ ಆಹಾರ ಸೇವಿಸುತ್ತವೆಯೇ? ಮುಂತಾದ ಪ್ರಶ್ನೆಗಳನ್ನು ಕೇಳುವ ಅವಕಾಶ ಸಿಗುತ್ತದೆ. ಇದರ ಚರ್ಚೆಯನ್ನು ಮುಂದುವರಿಸಲು ಶಿಕ್ಷಕರು, ಗಿಡಗಳ ಬಗ್ಗೆ, ಗಿಡದ ಭಾಗಗಳ ಬಗ್ಗೆ, ಗಿಡಗಳು ಹೇಗೆ ಬೆಳೆಯುತ್ತವೆ ಮತ್ತು ಅವುಗಳ ಉಪಯೋಗಗಳೇನು ಎಂದು ಮಕ್ಕಳಿಗೆ ವಿವರಿಸಿದರು.

ಮಕ್ಕಳು ತಮ್ಮ ಸುತ್ತಾಟದ ಸಂದರ್ಭದಲ್ಲಿ ಬೈಕ್‌ಗಳು, ಟ್ರ್ಯಾಕ್ಟರ್, ಕುರಿ, ಹಸುಗಳು ಮತ್ತು ಎಮ್ಮೆಗಳ  ಹಿಂಡುಗಳಿಗೆ ಮುಖಾ-ಮುಖಿಯಾದರು. ನಡೆಯುತ್ತ ನಡೆಯುತ್ತ ದಾರಿಯಲ್ಲಿ ಸಿಕ್ಕ ನೆರೆಹೊರೆಯವರತ್ತ ಕೈಬೀಸಿ ನಕ್ಕರು. ಇಂತಹ ಅನುಭವಗಳು ಮಕ್ಕಳ ಮನಸ್ಸಿಗೆ ಮುದ ನೀಡುತ್ತವೆ. ಯಾವತ್ತೂ ಮುಕ್ತವಾಗಿ ಮತ್ತು ನಿಯಮಿತವಾಗಿ ಅಡ್ಡಾಡುವ ಜಗತ್ತಿಗೆ ಪ್ರವೇಶ ಮಾಡುವುದೆಂದರೆ ಅವರಿಗೆ ಖುಷಿಯೇ ಆಗಿರುತ್ತದೆ. ಒಂದು ಹುಡುಗಿ ತನ್ನ ಕುಟುಂಬಕ್ಕೆ ಸೇರಿದ ಎಮ್ಮೆಗಳನ್ನು ನೋಡಿ ಪುಳಕಗೊಂಡಳು, ಮತ್ತೊಬ್ಬ ಬಾಲಕ ದಿನವೂ ಅವರು ನೀರು ತರುವ ಜಾಗವನ್ನು ಉಳಿದವರಿಗೆ ತೋರಿಸಿದ



**ನಂತರದ ಚಟುವಟಿಕೆಗಳು**

ಮಕ್ಕಳ ಗುಂಪು ದೇವಸ್ಥಾನದ ಬಳಿಗೆ ಬಂದಾಗ ಮತ್ತು ಅಲ್ಲಿ ಸಾಕಷ್ಟು ತೆರೆದ ಜಾಗ ಇದ್ದುದರಿಂದ ಎಲ್ಲರಿಗೂ ವೃತ್ತಾಕಾರದಲ್ಲಿ ಕುಳಿತುಕೊಳ್ಳುವಂತೆ ಶಿಕ್ಷಕರು ಹೇಳಿದರು. ಅಲ್ಲಿ ಶಿಕ್ಷಕರು ಚರ್ಚಾಪೂರ್ವ ತಯಾರಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸಿದರು ಮತ್ತು ನಡೆಯುತ್ತಾ ಕಂಡ ಸಂಗತಿಗಳ ಬಗ್ಗೆ ಮಕ್ಕಳೊಂದಿಗೆ ಮಾತುಕತೆ ನಡೆಸಿದರು. ಅಂಗನವಾಡಿ ಕೇಂದ್ರದಲ್ಲಿ ಸಕ್ರಿಯವಾಗಿ ಮಾತುಕತೆಯಲ್ಲಿ ಭಾಗಿಯಾಗದೇ ಇದ್ದ ಮಕ್ಕಳೂ ಕೂಡ ಇಲ್ಲಿ ತಮ್ಮ ಅನುಭವವನ್ನು ಖುಷಿಯಿಂದ ಹೇಳಿಕೊಂಡರು.

ಇದಾದ ಬಳಿಕ, ನಡೆಯುತ್ತಾ ಕಂಡ ದೃಶ್ಯಗಳನ್ನು ಚಿತ್ರಿಸುವ ಅವಕಾಶವನ್ನು ಶಿಕ್ಷಕರು ಅವರಿಗೆ ನೀಡಿದರು. ಮಕ್ಕಳು ಚಿತ್ರವನ್ನು ಬಿಡಿಸಲು ಕ್ರೆಯಾನ್‌ಗಳನ್ನು ಬಳಸಿದರು. (ಚಲನಾ ಕೌಶಲವನ್ನು ಬೆಳೆಸಲು ಇದು ಸಹಾಯಕ). ತಾವು ನೋಡಿದ್ದನ್ನು ಸುಲಭವಾಗಿ ನೆನಪು ಮಾಡಿಕೊಂಡು ಚೆಂದದ ಚಿತ್ರಗಳನ್ನು ರಚಿಸುವ ಮೂಲಕ ಅವರು ತಮ್ಮ ಸಂತೋಷವನ್ನು ಸಕ್ರಿಯವಾಗಿ ವ್ಯಕ್ತಪಡಿಸಿದ್ದು ವಿಶೇಷವಾಗಿತ್ತು. ಮಕ್ಕಳು ಸುತ್ತಮುತ್ತಲಿನ ವಾತಾವರಣದಲ್ಲಿ ತೊಡಗಿಕೊಂಡಿದ್ದರಿಂದ ಅವರ ಮನಸ್ಸು ಇನ್ನಷ್ಟು ಉಲ್ಲಾಸದಿಂದ ಕೂಡಿತ್ತು. ಹಾಗಾಗಿ ಶಿಕ್ಷಕರು ಅಂಗನವಾಡಿ ಕೇಂದ್ರದ ಒಳಗೆ ಮಾಡಬಹುದಾದದ್ದಕ್ಕಿಂತ ಹೆಚ್ಚಿನ ಚಟುವಟಿಕೆಯನ್ನು ಇಲ್ಲಿ ಮಾಡಲು ಸಾಧ್ಯವಾಯಿತು.





ಮಕ್ಕಳ ದೈಹಿಕ ಚಲನಾ ಕೌಶಲಗಳನ್ನು ಬೆಳೆಸಲು ಅವಕಾಶಗಳನ್ನು ನೀಡುವ ಸಲುವಾಗಿ ಶಿಕ್ಷಕರು ಅವರಿಗಾಗಿ ಒಂದು ಚಟುವಟಿಕೆಯನ್ನು ವಿನ್ಯಾಸಗೊಳಿಸಿದರು. ಇದರಲ್ಲಿ ಮಕ್ಕಳು ಎಲೆಗಳು, ಕೊಂಬೆಗಳು ಮತ್ತು ಹೂಗಳನ್ನು ಆರಿಸಿಕೊಂಡು ಬರಬೇಕಾಗಿತ್ತು. ಅದನ್ನು ಸಂಗ್ರಹಿಸುವ ಸಂದರ್ಭದಲ್ಲಿ ಮಕ್ಕಳು ಖುಷಿಯಿಂದ ನಗುತ್ತಿದ್ದರು, ಕುಣಿದಾಡುತ್ತಿದ್ದರು; "ನನಗೇ ಹೆಚ್ಚು ಎಲೆಗಳು ಸಿಕ್ಕವು", 'ನಿನಗೆ ಅಷ್ಟು ದೊಡ್ಡ ಕಡ್ಡಿ ಸಿಕ್ಕಿತಲ್ಲ' ಎಂದು ಮಾತನಾಡಿಕೊಳ್ಳುತ್ತಿದ್ದರು. ಶಿಕ್ಷಕರು ಅಗತ್ಯವೆನಿಸಿದಲ್ಲೆಲ್ಲ ಮಕ್ಕಳ ಮಾತಿನ ನಡುವೆ ಮಧ್ಯಪ್ರವೇಶ ಮಾಡಿ 'ಚಿಕ್ಕದು ಮತ್ತು ದೊಡ್ಡದು, ಹೆಚ್ಚು ಮತ್ತು ಕಡಿಮೆ' ಎಂಬ ಪರಿಕಲ್ಪನೆ ಅವರಿಗೆ ಅರ್ಥವಾಗುವಂತೆ ಚರ್ಚೆ ಮಾಡುತ್ತಿದ್ದರು.

ಇಂತಹ ಖುಷಿಯ ವಾತಾವರಣದಲ್ಲಿ ಮಕ್ಕಳು ತಮ್ಮ ಸುತ್ತಲಿನ ಪರಿಸರವನ್ನು ಪರಿಶೋಧಿಸಲು, ಇತರ ಮಕ್ಕಳ ಜೊತೆ ಆಟವಾಡಲು ಮತ್ತು ಶಿಕ್ಷಕರು ನಡೆಸಿದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಪ್ರೇರೇಪಿತರಾಗಿರುತ್ತಾರೆ. ಇಂತಹ ಉಲ್ಲಾಸದ ವಾತಾವರಣದಲ್ಲಿ ಮಕ್ಕಳಿಗೆ ಜಗಳವಾಡಲು, ಕಾದಾಡಲು ಒಂಚೂರೂ ಅವಕಾಶ ಇರುವುದಿಲ್ಲ. 'ಹೂವುಗಳನ್ನು, ಎಲೆಗಳನ್ನು ಕೀಳಬೇಡಿ', 'ರಸ್ತೆ ಮೇಲೆ ಓಡಾಡಬೇಡಿ', 'ರಸ್ತೆಯನ್ನು ಎಚ್ಚರಿಕೆಯಿಂದ ದಾಟಿ' ಮುಂತಾದ ಸೂಚನೆಗಳು ಮಕ್ಕಳಿಗೆ ಉತ್ತಮ ಸಾಮಾಜಿಕ ನಡವಳಿಕೆಯನ್ನು ಅನುಸರಿಸಲು ಉತ್ತೇಜನ ನಿಡುತ್ತವೆ.

**ಉಪಸಂಹಾರ**

ಮಾಡಿ ಕಲಿಯುವ ಇಂತಹ ವಾಸ್ತವ ಅನುಭವಗಳಿಂದ ದಕ್ಕುವ ಕಲಿಕೆ ಮಕ್ಕಳಲ್ಲಿ ಸುದೀರ್ಘ ಪ್ರಭಾವವನ್ನು ಉಂಟು ಮಾಡುತ್ತದೆ. ಮಕ್ಕಳನ್ನು ನಾವು ಅಂಗನವಾಡಿ ಕೇಂದ್ರದಿಂದ ಹೊರಗೆ ಕರೆ ತಂದಾಗ ಇದು ಯಶಸ್ವಿಯಾಗಿದೆ ಮತ್ತು ಅವರಿಗೆ ಪ್ರಕೃತಿಯನ್ನು ಶೋಧಿಸಲು ಮತ್ತು ಹೊಸದನ್ನು ಕಾಣುವ ಅವಕಾಶಗಳನ್ನು ಒದಗಿಸುತ್ತದೆ. ಇಡೀ ಪ್ರಕ್ರಿಯೆಯಲ್ಲಿ ಮಕ್ಕಳು ಅರಿವನ್ನು ಕಟ್ಟಿಕೊಳ್ಳಲು ಅಗತ್ಯವಾದ ವೇದಿಕೆಯನ್ನು ಶಿಕ್ಷಕರು ಒದಗಿಸಿ-ಕೊಡಬೇಕು.

ವಿಷಯಾಧಾರಿತ ಪಠ್ಯಕ್ರಮದೊಂದಿಗೆ ಪ್ರಕೃತಿ ಸುತ್ತಾಟವನ್ನೂ ಜೊತೆಗೂಡಿಸಿದರೆ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಮಕ್ಕಳ ಅರಿವು, ಯೋಚನೆ ಮತ್ತು ಕುತೂಹಲವನ್ನು ಹೆಚ್ಚಿಸುವಲ್ಲಿ ಅದೊಂದು ಮಹತ್ವದ ಬೋಧನಾ ವಿಧಾನವಾಗುತ್ತದೆ. ಪ್ರಕೃತಿ ಸಂಚಾರದ ಜೊತೆಗೆ ಇನ್ನಿತರ ಪೂರಕ ಚಟುವಟಿಕೆಗಳನ್ನೂ ಸೇರಿಸಿದರೆ ಅದು ಮಕ್ಕಳ ಸಾಮಾಜಿಕ, ಭಾವನಾತ್ಮಕ, ಭಾಷೆ, ಸಂಜ್ಞಾನಾತ್ಮಕ, ದೈಹಿಕ ಮತ್ತು ಸೃಜನಾತ್ಮಕ ಅಂಶಗಳ ಬೆಳವಣಿಗೆಗೆ ದಾರಿ ಮಾಡಿಕೊಡುತ್ತದೆ. ಪ್ರಕೃತಿ ಸಂಚಾರದ ಸಂದರ್ಭದಲ್ಲಿ ಮಕ್ಕಳ ಆಸಕ್ತಿ ಹೆಚ್ಚಾಗುತ್ತದೆ ಮತ್ತು ಇದರಿಂದ ಅವರು ನಂತರದ ಪೂರಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಹಾಯವಾಗುತ್ತದೆ. ಅಂತಿಮವಾಗಿ ಅವರಿಗೆ ಉಲ್ಲಾಸಮಯ ವಾತಾವರಣದಲ್ಲಿ ಕಲಿಕೆಗೆ ಅವಕಾಶ ಕಲ್ಪಿಸಿದಂತಾಗುತ್ತದೆ.



**ಸ್ವೀಕೃತಿ:**
ಈ ಲೇಖನವನ್ನು ಬರೆಯುವಲ್ಲಿ ಯೋಗೇಶ್ ಜಿ.ಆರ್. (ಇಸಿಇ ಸಂಗಾರೆಡ್ಡಿ) ಅವರ ಸಹಾಯ ಮತ್ತು ಮಾರ್ಗದರ್ಶನವನ್ನು ಸ್ಮರಿಸಲು ಲೇಖಕರು ಬಯಸುತ್ತಾರೆ.

1 ಇಸಿಇ ಸಂಗಾರೆಡ್ಡಿ ಅಂಗನವಾಡಿಯು ಶಿಕ್ಷಕರ ಸಾಮರ್ಥ್ಯವನ್ನು ವೃದ್ಧಿಸುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಒಂದು ಉಪಕ್ರಮವಾಗಿದೆ. ಇದರ ಭಾಗವಾಗಿ, ಕೇಂದ್ರಗಳಲ್ಲಿ ಮಕ್ಕಳ ವಯೋಮಾನವನ್ನು ಪರಿಗಣಿಸಿ ಅಭಿವೃದ್ಧಿಗೆ ಪೂರಕವಾದ ಕಲಿಕಾ ಕಾರ್ಯಕ್ರಮವನ್ನು ಜಾರಿಗೆ ತರಲು ಅಂಗನವಾಡಿ ಶಿಕ್ಷಕರಿಗೆ ಸಹಾಯ ಮಾಡಲಾಗುತ್ತದೆ. ಮಕ್ಕಳು ವರ್ಷವಿಡೀ ಪರಿಶೋಧಿಸಿ, ವಿವರವಾಗಿ ನೋಡಬಹುದಾದ ಗಿಡಗಳು, ಹಣ್ಣುಗಳು ಅಥವಾ ಋತುಗಳು ಮುಂತಾದ 14 ವಿಷಯಗಳಿಗೆ ವಿಸ್ತೃತವಾದ ಯೋಜನೆಗಳನ್ನು ರೂಪಿಸಲಾಗಿದೆ.



**ಮದ್ದಿರಾಲ ಸಾಯಿ ಪ್ರವೀಣ್** ಅವರು ಸದ್ಯ ಸಂಗಾರೆಡ್ಡಿ ಜಿಲ್ಲಾ ಸಂಸ್ಥೆಯಲ್ಲಿ ಆರಂಭಿಕ ಬಾಲ್ಯಶಿಕ್ಷಣ (ಇಸಿಸಿ)ದ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದ ಬಳಿಕ ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಕಥೆಗಳನ್ನು ಓದುವುದು ಮತ್ತು ಸಂಗೀತವನ್ನು ಆಲಿಸುವುದೆಂದರೆ ಬಲು ಇಷ್ಟ. ಅವರನ್ನು maddirala.praveen@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ನಾಗಮಣಿ ಎಸ್.ಎನ್.**